## GIF, ಇಮೇಜ್ ಬಳಸಿ ರಿಟ್ವೀಟ್ ಮಾಡಿ

ಮೈಕ್ರೋ ಬ್ಲಾಗಿಂಗ್ ಸೈಟ್ ಟ್ವಿಟರ್‌ನಲ್ಲಿ ರಿಟ್ವೀಟ್ ಮಾಡುವಾಗ GIF, ಇಮೇಜ್ ಅಥವಾ ವಿಡಿಯೊ ಬಳಸಿ ರಿಟ್ವೀಟ್ ಮಾಡುವ ಹೊಸ ಫೀಚರ್ ಸೇರ್ಪಡೆಯಾಗಿದೆ. ರಿಟ್ವೀಟ್ ಮಾಡುವಾಗ ರಿಟ್ವೀಟ್ ಮತ್ತು ರಿಟ್ವೀಟ್ ವಿತ್ ಕಾಮೆಂಟ್ ಎಂಬ ಆಯ್ಕೆಯನ್ನು ಬಳಕೆದಾರರಿಗೆ ನೀಡಲಾಗಿದೆ. ಇಲ್ಲಿ ರಿಟ್ವೀಟ್ ವಿತ್ ಕಾಮೆಂಟ್ ಆಯ್ಕೆ ಮಾಡಿದರೆ, ನಿಮ್ಮ ಫೋನ್ ಗ್ಯಾಲರಿಯಲ್ಲಿರುವ ವಿಡಿಯೊ/ಇಮೇಜ್ ಅಥವಾ GIF ಗ್ಯಾಲರಿಯಿಂದ ಯಾವುದಾದರೊಂದನ್ನು ಆಯ್ಕೆ ಮಾಡಿ ರಿಟ್ವೀಟ್ ಮಾಡಬಹುದು. ಬಳಕೆದಾರರ ಅಭಿಪ್ರಾಯಗಳನ್ನು ಸುಲಭವಾಗಿ ವ್ಯಕ್ತಪಡಿಸಲು ಈ ಫೀಚರ್ ಪರಿಚಯಿಸಲಾಗಿದೆ ಎಂದು ಟ್ವಿಟರ್ ಹೇಳಿದೆ. ವೆಬ್ ಮತ್ತು ಮೊಬೈಲ್ ಸೈಟ್‌ನಲ್ಲಿ ಈ ಫೀಚರ್ ಲಭ್ಯ

## ಗೂಗಲ್ ಲೊಕೇಶನ್ ಹಿಸ್ಟರಿ ಡಿಲೀಟ್ ಮಾಡುವ ಆಯ್ಕೆ

ತನ್ನ ಬಳಕೆದಾರರ ಅನುಮತಿ ಇಲ್ಲದೆ ಗೂಗಲ್ ಲೊಕೇಶನ್ ಹಿಸ್ಟರಿಯನ್ನು ಬಳಸುತ್ತಿದೆ ಎಂಬ ಆರೋಪಗಳು ಕೇಳಿ ಬಂದ ಹಿನ್ನೆಲೆಯಲ್ಲಿ ಗೂಗಲ್ ತನ್ನ ಬಳಕೆದಾರರಿಗೆ ಸ್ವಯಂಚಾಲಿತವಾಗಿ ಲೊಕೇಶನ್ ಹಿಸ್ಟರಿ ಡಿಲೀಟ್ ಮಾಡುವ ಆಯ್ಕೆಯನ್ನು ಪರಿಚಯಿಸಲು ಸಿದ್ಧವಾಗಿದೆ. ಗೂಗಲ್ ಲೊಕೇಶನ್ ಹಿಸ್ಟರಿಯನ್ನು ಬಳಕೆದಾರರೇ ಡಿಲೀಟ್ ಮಾಡುವ ಆಯ್ಕೆ ಇದ್ದರೂ ಇನ್ನು ಮುಂದೆ ಯಾವ ಲೊಕೇಶನ್ ಹಿಸ್ಟರಿಯನ್ನು ಉಳಿಸಬೇಕು. ಯಾವುದನ್ನು ಅಳಿಸಬೇಕು ಮತ್ತು ಯಾವುದನ್ನು ನಿರ್ದಿಷ್ಟ ಅವಧಿವರೆಗೆ ಉಳಿಸಿಕೊಳ್ಳಬೇಕು ಎಂಬ ಆಯ್ಕೆಯನ್ನು ಗೂಗಲ್ ನೀಡಲಿದೆ.

ಗೂಗಲ್ ಸಂಸ್ಥೆಯ ಹೇಳಿಕೆ ಪ್ರಕಾರ ಬಳಕೆದಾರರು ಲೊಕೇಶನ್ ಹಿಸ್ಟರಿಯನ್ನು ಅಳಿಸಲು ಮೂರು ಆಯ್ಕೆಗಳನ್ನು ನೀಡಲಿದೆ. ಅದರಲ್ಲಿ ಮೊದಲನೆಯದು ಬಳಕೆದಾರರೇ ಲೊಕೇಶನ್ ಹಿಸ್ಟರಿಯನ್ನು ಡಿಲೀಟ್ ಮಾಡುವ ಆಯ್ಕೆ. ಎರಡನೆಯದ್ದು 18 ತಿಂಗಳುಗಳ ಕಾಲ ಲೊಕೇಶನ್ ಹಿಸ್ಟರಿಯನ್ನು ಉಳಿಸಿ, ಆಮೇಲೆ ಡಿಲೀಟ್ ಆಗುವಂತದ್ದು. ಮೂರನೇ ಆಯ್ಕೆ ಎಂದರೆ ಲೊಕೇಶನ್ ಹಿಸ್ಟರಿಯನ್ನು ಮೂರು ತಿಂಗಳವರಿಗೆ ಉಳಿಸಿ ಆಮೇಲೆ ಸ್ವಯಂಚಾಲಿತವಾಗಿ ಡಿಲೀಟ್ ಮಾಡುವ ಆಯ್ಕೆ ಇದಾಗಿದೆ.




## ಏರ್ ಟೆಲ್ ಇ ಪುಸ್ತಕ




ಏರ್‌ಟೆಲ್ ನೆಟ್‌ವರ್ಕ್ ಕಂಪನಿ ಇ ಪುಸ್ತಕ ಸೇವೆಯನ್ನು ಪರಿಚಯಿಸಿದೆ. ಗೂಗಲ್ ಪ್ಲೇ ಸ್ಟೋರ್‌ನಲ್ಲಿ **Airtel Books ebooks and stories App** ಡೌನ್‌ಲೋಡ್ ಮಾಡುವ ಮೂಲಕ ಅದರ ಪ್ರಯೋಜನ ಪಡೆಯಬಹುದು. ಅಂಡ್ರಾಯ್ಡ್ ಮತ್ತು iOS ಬಳಕೆದಾರರಿಗೆ ಈ ಆ್ಯಪ್ ಲಭ್ಯವಿದೆ.

ಅದರಲ್ಲಿ ಪ್ರಮುಖ ಭಾರತೀಯ ಮತ್ತು ಅಂತರರಾಷ್ಟ್ರೀಯ ಲೇಖಕರ 70,000ಕ್ಕಿಂತಲೂ ಹೆಚ್ಚು ಪುಸ್ತಕಗಳು ಲಭ್ಯವಿದೆ. ಏರ್‌ಟೆಲ್, ಬಳಕೆದಾರರಿಗೆ 30 ದಿನಗಳ ಉಚಿತ ಸೇವೆಯನ್ನು ಒದಗಿಸಲಿದೆ. ಈ ಅವಧಿಯಲ್ಲಿ ಬಳಕೆದಾರರು ರೀಡರ್ಸ್ ಕ್ಲಬ್ ನಲ್ಲಿ ಉಚಿತವಾಗಿರುವ ಇ–ಪುಸ್ತಕಗಳನ್ನು ಉಚಿತವಾಗಿ ಓದಬಹುದು. ಈ ಸೇವೆ ಏರ್‌ಟೆಲ್ ಗ್ರಾಹಕರಿಗೆ ಮಾತ್ರವಲ್ಲ ಇತರ ಮೊಬೈಲ್ ಸೇವೆಗಳ ಗ್ರಾಹಕರಿಗೂ ಲಭ್ಯವಿದೆ.

ರೀಡರ್ಸ್ ಕ್ಲಬ್‌ನಲ್ಲಿ 5000 ಇ ಪುಸ್ತಕಗಳಿವೆ. ರೀಡರ್ಸ್ ಕ್ಲಬ್‌ನಲ್ಲಿ ಬಳಕೆದಾರರು ಒಂದು ಬಾರಿ 5 ಪೇಯ್ಡ್ ಇ ಪುಸ್ತಕಗಳನ್ನು ಓದಬಹುದು. ಏರ್ ಟೆಲ್ ಇ–ಪುಸ್ತಕದಲ್ಲಿ ಕಥೆ ಕಾದಂಬರಿ, ಪ್ರೇಮ, ವ್ಯವಹಾರ, ಇತಿಹಾಸ, ರಾಜಕೀಯ, ಫಿಟ್‌ನೆಸ್, ಅಧ್ಯಾತ್ಮಕ್ಕೆ ಸಂಬಂಧಿಸಿದ ಪುಸ್ತಕಗಳು ಲಭ್ಯವಿದೆ.

ಏರ್‌ಟೆಲ್ ಇ ಪುಸ್ತಕದಲ್ಲಿರುವ ಎಲ್ಲ ಪುಸ್ತಕಗಳನ್ನು ಓದಲು 6 ತಿಂಗಳಿಗೆ ಚಂದಾಶುಲ್ಕ 129 ರೂಪಾಯಿ. ಒಂದು ವರ್ಷದ ಚಂದಾ ಶುಲ್ಕ 199 ರೂಪಾಯಿ. ಈ ರೀತಿ ಚಂದಾದಾರರಾಗುವಾಗ ಮೊದಲ ತಿಂಗಳು ಉಚಿತವಾಗಿ ಪುಸ್ತಕ ಓದಬಹುದಾಗಿದೆ. ಇಂಗ್ಲಿಷ್ ಮತ್ತು ಹಿಂದಿ ಭಾಷೆಯ ಪುಸ್ತಕಗಳು ಮಾತ್ರ ಇಲ್ಲಿವೆ.

■ ರಶ್ಮಿ ಕೆ.